ಅಮರಯ್ಯಾ ಪತ್ರಿಮಠ, ಸುರಪೂರ
- ಹಾಸ್ಯ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಬೇಕಾದರೆ ಏನು ಮಾಡಬೇಕು?



ದೃಷ್ಟಿ ವಕ್ರವಾಗಿರಬೇಕು, ಬುದ್ಧಿ ನೆಟ್ಟಗಿರಬೇಕು.

ಮುರಲೀಧರ ಕುಲಕರ್ಣಿ, ಬೀದರ್
- ರಾಜಕಾರಣಿಗಳಿಗಿಂತ ಅವರ ಪತ್ನಿಯರೇ ಹೆಚ್ಚು ಧನಿಕರಾಗಿರಲು ಕಾರಣವೇನು?

ಏಕೆಂದರೆ ಹೆಂಡತಿ ಬೆಟರ್ ಹಾಫ್...!

ಅನಂತಪದ್ಮನಾಭ ಎಚ್.ಎಂ. ಮೈಸೂರು
- ಕಣ್ಣು, ಕಿವಿ, ಕೈಕಾಲು, ಶ್ವಾಸಕೋಶ, ಎಲ್ಲ ಒಂದೊಂದು ಜೊತೆ. ನಾಲಿಗೆ, ಹೃದಯ, ಹೊಟ್ಟೆ, ಮೆದುಳು ಒಂದೇ. ಏಕೆ?

ಓವರ್ ಹೆಡ್ ಟ್ಯಾಂಕ್ ನಿಯಮ. ಒಂದು ಟ್ಯಾಂಕ್ ತುಂಬಲಿಕ್ಕೆ ಹಲವಾರು ಪೈಪ್‌ಗಳು.

ಎಂ.ಎ. ಕುಮಾರ್, ಬೆಂಗಳೂರು
- ಗಂಡಸರ ತಲೆಗೂದಲು ಬೇಗ ಖಾಲಿಯಾಗಲು ಕಾರಣವೇನು?

ಆಗಾಗ್ಗೆ ಅವರ ಮೆದುಳಿಗೇ



ಕೈಹಾಕುವವರು ಇರುತ್ತಾರಲ್ಲ! ಬುಡ ಅಲ್ಲಾಡಿದರೆ ಗಿಡ ಹಾಳು.

ಡಾ. ವಿ. ಪುಗಳೇಂದಿ, ಬಳ್ಳಾರಿ
- ಕವಿಗೋಷ್ಠಿಗಳಲ್ಲಿ ಕವನ ವಾಚನ ಮಾಡುವವರು ಯಾಕೆ ಒಂದೊಂದು ಪದವನ್ನೂ ಎರಡೆರಡು ಸಾರಿ ಹೇಳುತ್ತಾರೆ?

ವಾಚ್ ದಿನಕ್ಕೆರಡ್ಸರ್ತಿ ತೋರ್ರಿದ್ದನ್ನೇ ತೋರ್ರ್ಸೋ ಹಾಗೆ ವಾಚನ ಅಂದ್ರೆ ಎರೆಡು ಸರ್ತಿ ಹೇಳೂದೂಂದ್ಕೊಂಡಿರ್‍ತಾರಂತೆ.

ಮಂಜುನಾಥ ಎಸ್, ಬೆಂಗಳೂರು
- ಹಳ್ಳ ಇದೆ ಎಂದು ಗೊತ್ತಿದ್ದರೂ ಹಳ್ಳದಲ್ಲಿ ಬೀಳುವವರನ್ನು ಏನೆನ್ನಬೇಕು ಸಾರ್?

ನವವಿವಾಹಿತರು.

ಹರಿತಸ, ಬೆಂಗಳೂರು
- ಇಳಿವಯಸ್ಸಿನಲ್ಲಿ ದೇವರ ಮೇಲೆ ಭಕ್ತಿ ಹೆಚ್ಚಾಗುತ್ತದೆ ಯಾಕೆ ರಾಮ್‌ಜೀ?

ಫೈನಲ್ ಎಕ್ಸಾಮ್‌ನ ಸಿಲಬಸ್ ಅವನೇ ಆದ್ದರಿಂದ.

ಎಸ್.ಎನ್. ಮಹಾಬಲರಾವ್, ಎನ್ನಾರ್‍ಪುರ
- ಮರೆಯುವ ವಯಸ್ಸಿನಲ್ಲಿ ಮೆರೆಯೋದೇಕೆ?

ಮೆರೆಯಬಾರದೆಂದು ಮರೆತುಹೋಗಿರುತ್ತದಂತೆ.

ಬಿ. ಚಂದ್ರೇಗೌಡ, ಬೆಂಗಳೂರು
- ನಗ್ನಸತ್ಯ ಎಂದರೇನು?

ಅಂತರಂಗದಲ್ಲಿ ಕಾಣಿಸುವ, ಬಹಿರಂಗದಲ್ಲಿ ಕಂಡರೆ ಕಷ್ಟವಾಗಬಹುದಾದ 'ನಿಜ'ಸ್ಥಿತಿ.

ಕಾಳೀಹುಂಡಿ ಶಿವಕುಮಾರ್, ಮೈಸೂರು
- ನಿಮಗೆ ಸಕಲಕಲಾವಲ್ಲಭ ಎಂಬ ಬಿರುದನ್ನು ನೀಡಬೇಕೆಂದಿರುವೆ. ಒಪ್ಪುವಿರಾ?

ನನ್ನ ಬಟ್ಟೆಯ ಮೇಲೆ ಕಾಫಿ, ಗ್ರೀಸ್, ಚಟ್ನಿ, ಎಲ್ಲವುಗಳ ಕಲೆಗಳು ಇರುವುದರಿಂದ... ಹಾಗೆ ಕರೆಯಬಹುದು.

ವಿ.ಜಿ. ಗಾಯತ್ರಿ, ಗೋಕರ್ಣ
- ಇತ್ತೀಚೆಗೆ ಹೆಣ್ಣುಮಕ್ಕಳು ಮಕ್ಕಳನ್ನು ಪಡೆಯಲು ಹಿಂದೇಟು ಹಾಕುತ್ತಾರೆ. ಏಕೆ?

ಮೂರೇ ವರ್ಷದಲ್ಲಿ ಮತ್ತೊಮ್ಮೆ ಮೊದಲಿನಿಂದ ಎಬಿಸಿಡಿ ಒನ್‌ಟೂತ್ರೀ ಕಲಿಯಬೇಕಲ್ಲಾ ಎಂದು ಬೇಸರವಂತೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
- ದೇವರು ದಿಂಡರನ್ನು ನಂಬದ ಇಲ್ಲೋರ್ವರು ಬಹಳ ದಿವಸಗಳಿಂದ ನೆಮ್ಮದಿಯಿಂದ ಇದ್ದಾರಲ್ಲಾ....?

ಸ್ವಂತದಲ್ಲಿ ನಂಬಿಕೆ ಇದೆಯಂತೆ. ಆತ್ಮಬಲಂ ಬಲಂ.

ಶ್ರೀನಿವಾಸ ಪದಕಿ, ಮುಂಬಯಿ
- ಜೀವನದ ನಿಜವಾದ ಅರ್ಥ ಏನು ಗುರು?

ಕಾಡು(ವ) ಪ್ರಾಣಿಗಳೊಡನೆ ತಗ್ಗಿಬಗ್ಗಿ ಸಹಬಾಳ್ವೆ ನಡೆಸುವುದೇ ಜೀವನ.

## ಬಹುಮಾನಿತ ಪತ್ರೆ

ಪಿ.ಜೆ. ರಾಘವೇಂದ್ರ, ಮೈಸೂರು
- ಅಡುಗೂಲಜ್ಜಿಯ ಮೊಮ್ಮಗಳಿರಬಹುದಾ ಗೂಗಲಜ್ಜಿ?

ಕರೆಕ್ಟ್. ಆದುದರಿಂದಲೇ ಊರ ಕಥೆಯೆಲ್ಲಾ ಗೊತ್ತಿರುವುದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
- ವಯಸ್ಸನ್ನು ನಿಲ್ಲಿಸುವ ಶಕ್ತಿ ಹೆಣ್ಣಿಗೆ, ಸಮಯವನ್ನು ನಿಲ್ಲಿಸುವ ಶಕ್ತಿ ಗಂಡಿಗೆ ದೇವರು ಕೊಟ್ಟರೆ?

ಹೆಣ್ಣಿಗೆ ಈಗಲೇ ಆ ಶಕ್ತಿ ಇದೆ. ಎಷ್ಟೋ ತಾರೆಯರ ವಯಸ್ಸು ದಶಕಗಳ ಕಾಲ ಇಪ್ಪತ್ತೇ ಆಗಿರುತ್ತದೆ.

ದಿನೇಶ್, ಗುಡ್ಡದೂರು
- ಗಂಡಸರನ್ನೇಕೆ ಸೂರ್ಯ ಚಂದ್ರರಿಗೆ ಹೋಲಿಸುವುದಿಲ್ಲ?

ಗ್ರಹಗಳು, ಧೂಮಕೇತುಗಳಿಗೂ ಹೋಲಿಸಲು ಏನಾದರೂ ಬೇಕಿತ್ತಲ್ಲ!

ವಿ. ಹಮೀದ್, ವಿಟ್ಲ
- ಕ್ಲೌಡ್ ಬಿತ್ತನೆಗೂ, ಲವ್ ಬಿತ್ತನೆಗೂ ಇರುವ ವ್ಯತ್ಯಾಸವೇನು?



ಅದರಿಂದ ವರ್ಷಧಾರೆ, ಇದರಿಂದ ಹರ್ಷಧಾರೆ.

ಹೆಚ್.ಎಸ್. ಪದ್ಮಶ್ರೀ, ಬೆಂಗಳೂರು
- ಮಕ್ಕಳ ಜನ್ಮದಿನ ಬದಲಿಸಿ ಶಾಲೆಗೆ ಸೇರಿಸುವವರು ಮಕ್ಕಳಿಗೆಂತಹ ಮಾದರಿಯಾಗಬಲ್ಲರು? ಭ್ರಷ್ಟತೆ ಅಲ್ಲಿಂದಲೇ ಶುರುವಲ್ಲವೆ?

ಬರ್ತ್ ಸರ್ಟಿಫಿಕೇಟ್ ಬಚ್ಚಿಟ್ಟ ಕರ್ಣನ ಮಾದರಿ! ಮಗುವಿಗೆ ಆಸೆ ತೋರಿಸಿ ಅಳು ನಿಲ್ಲಿಸಿದಾಗಲೇ ಭ್ರಷ್ಟತೆ ಶುರು.

■ ರಾಮ್